## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿ : | 270/**19** |

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀಮತಿ ಶಾನವಾಜ್ | |
| ಗಂಡನ ಹೆಸರು | ಮಹಮ್ಮದ್ ಇಸ್ಮಾಯಿಲ್ | ಸಾಕ್ಷಿಗೆ ದಿಃ **15.11.2021** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **48** ವರ್ಷ | |
| ಉದ್ಯೋಗ | ಮನೆ ಕೆಲಸ | ಪಿ.ಡಬ್ಲ್ಯೂ **-04** |
| ವಾಸ ಸ್ಥಳ | ಮೈಸೂರು | ಸಿ.ಡಬ್ಲ್ಯೂ **-05** |

### ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ಮೃತ ರೇಷ್ಮಾ ಬಾನು ನನ್ನ ಮಗಳಾಗಬೇಕು. ಆರೋಪಿ ಅಳಿಯನಾಗಬೇಕು ಅಂದರೆ ರೇಷ್ಮಾ ಬಾನುವಿನ ಗಂಡ ಇರುತ್ತಾನೆ. ನನ್ನ ಮಗಳು ರೇಷ್ಮಾ ಬಾನು ಆರೋಪಿಯ ಜೊತೆಗೆ 8 ವರ್ಷದ ಹಿಂದೆ ಮದುವೆ ಆಗಿದ್ದಳು. ನನ್ನ ಮಗಳಿಗೆ ಆರೋಪಿಯಿಂದ 2 ಗಂಡು ಮಕ್ಕಳು ಮತ್ತು 1 ಹೆಣ್ಣು ಮಗು ಇರುತ್ತಾರೆ. ಆರೋಪಿ ಮತ್ತು ನನ್ನ ಮಗಳು ಮದುವೆಯಾದ ಮೇಲೆ 8 ವರ್ಷ, 3 ಮಕ್ಕಳು ಆಗುವವರೆಗೆ ನಮ್ಮ ಮನೆಯಲ್ಲಿಯೇ ಇದ್ದರು. ನಮ್ಮ ಮನೆ ಮಧೀನಾ ಮಸೂದೆ ಹತ್ತಿರ ಕ್ಯಾತಮಾರನ ಹಳ್ಳಿ ಮೈಸೂರಿನಲ್ಲಿ ಇರುತ್ತದೆ. ಆರೋಪಿತನು ನನ್ನ ಮಗಳಿಗೆ ಹೊಡಿಬಡಿ ಮಾಡಿ ಹಿಂಸೆ ಕೊಡುತ್ತಿದ್ದನು. ಆರೋಪಿತನು ಆತನ ತಮ್ಮ ನೌಶಾದ ಈತನಿಗೆ ಯಾರು ನೋಡುವವರು ಇಲ್ಲ ಎಂದು ತಮ್ಮ ಮನೆಯಲ್ಲಿಯೇ ತಂದು ಇಟ್ಟುಕೊಂಡಿರುತ್ತಾರೆ. ಆರೋಪಿತನು ತನ್ನ ತಮ್ಮನ ಜೊತೆಗೆ ತನ್ನ ಹೆಂಡತಿಯ ಸಂಬಂಧ ಇದೆ ಎಂದು ಅನುಮಾನಪಟ್ಟು ನನ್ನ ಮಗಳಿಗೆ ಬಹಳ ಹಿಂಸೆ ಕೊಡುತ್ತಿದ್ದನು. ನಾನು ನನ್ನ ಮಗಳಿಗೆ ಸಮಾಧಾನ ಹೇಳುತ್ತಿದೆನು ಆದರೂ ಆರೋಪಿತನು ಸಾಯಂಕಾಲ ಬಂದು ನನ್ನ ಮಗಳಿಗೆ ಹಿಂಸೆ ( ಟಾರ್ಚರ್ ) ಕೊಡುತ್ತಿದ್ದನು. ಆರೋಪಿತನು ಹೆಂಡತಿಗೆ ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ದಿಃ 22.07.2019 ರಂದು

ಬೇರೆ ಮನೆ ಮಾಡಿ ತನ್ನ ಹೆಂಡತಿ ಮಕ್ಕಳನ್ನು ಮೈಸೂರಿನ ಗಾಯಿತ್ರಿಪುರಂ ನಲ್ಲಿ ಬಾಡಿಗೆ ಮನೆ ಮಾಡಿ ವಾಸವಾಗಿದ್ದರು, ದಿಃ 24.07.2019 ರಂದು ರಾತ್ರಿ ಆರೋಪಿತನು ನನ್ನ ಮಗಳಿಗೆ ಹಿಂಸೆ (ಟಾರ್ಚರ್ ) ಮಾಡಿರುತ್ತಾನೆ. ಅದೇ ದಿನ ರಾತ್ರಿ ನಮ್ಮ ಮನೆಗೆ ಬಂದು ನಿಮ್ಮ ಮಗಳಿಗೆ ಮರ್ಡರ್ ಮಾಡುತ್ತೇನೆ ಎಂದು ಹೇಳಿದನು, ನಾವು ಕೋಪದಲ್ಲಿ ಹೇಳಿರಬಹುದು ಎಂದು ಅಂದುಕೊಂಡೆವು, ಆರೋಪಿತನು ಮರುದಿವಸ ಅಂದರೆ ದಿಃ 25.07.2019 ರಂದು ಬೆಳಿಗ್ಗೆ ನಮ್ಮ ಮನೆಯಲ್ಲಿ ಟೀ ಕುಡಿದು ನಿಮ್ಮ ಮಗಳಿಗೆ ಕೊಲೆ ಮಾಡುತ್ತೇನೆ ಎಂದು ಹೇಳಿ ತನ್ನ ಮನೆಗೆ ಹೋದನು. ಸದರಿ ಮನೆಯಲ್ಲಿ ನನ್ನ ಮಗಳು ಹಾಗೂ ಅವಳ ಚಿಕ್ಕ ಮಗು ಮನೆಯಲ್ಲೆ ಇದ್ದರು ಉಳಿದ ಮಕ್ಕಳನ್ನು ಶಾಲೆಗೆ ಕಳುಹಿಸಿದರು. ಆರೋಪಿತನು ದಿಃ 25.07.2019 ರಂದು ಬೆಳಿಗ್ಗೆ ನನ್ನ ಮಗಳನ್ನು ಕೊಲೆ ಮಾಡಿ ಓಡಿ ಹೋಗಿದ್ದನು, ನಮಗೆ ನಮ್ಮ ಮಗಳ ಕೊಲೆ ಆದ ಬಗ್ಗೆ ದಿಃ 25.07.2019 ರಂದು ಮಧ್ಯಾಹ್ನ 2.00 ಗಂಟೆಯ ಸಮಾರಿಗೆ ಗೊತ್ತಾಗಿರುತ್ತದೆ. ನಾನು ಮತ್ತು ನನ್ನ ಮಗ, ತಕ್ಷಣ ನನ್ನ ಮಗಳ ಮನೆಗೆ ಹೋಗಿ ನೋಡಿದಾಗ ನನ್ನ ಮಗಳು ಮೃತಪಟ್ಟಿದ್ದಳು, ಮಗುವನ್ನು ಬೇರೆಯವರು ಎತ್ತಿಕೊಂಡು ನಿಂತಿದ್ದರು, ಆರೋಪಿತನು ಓಡಿ ಹೋಗಿದ್ದ. ಆರೋಪಿತನು ನನ್ನ ಮಗಳ ಕತ್ತನ್ನು ಕತ್ತರಿಸಿದನು ಮತ್ತು ಪಕ್ಕೆಗೆ ಚುಚ್ಚಿದನು. ಸಾಕ್ಷಿಯು ಪೋಟೋದಲ್ಲಿ ಇರುವ ತನ್ನ ಮಗಳ ಶವದ ಪೋಟೋಗಳನ್ನು ನೋಡಿ ಗುರುತಿಸಿದ್ದು, ಸದರಿ ಪೋಟೋಗಳನ್ನು ಈಗಾಗಲೇ ನಿಪಿ-5 ರಿಂದ ನಿಪಿ-7 ಎಂದು ಗುರುತಿಸಲಾಗಿದೆ. ಸಾಕ್ಷಿಯು ನ್ಯಾಯಾಲಯದ ಮುಂದೆ ತನ್ನ ಮಗಳ ಬಟ್ಟೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಂದು ಚೂಡಿದಾರ ಟಾಪ್ (ಡಾರ್ಕ್ ಬ್ಲೂ ಕಲರ್) ಎಂ.ಓ-2 ಎಂದು, ಹಳದಿ ಮತ್ತು ಹಸಿರು ಬಣ್ಣ ಮತ್ತು ನೀಲಿ ಬಣ್ಣದ ಸಲ್ವಾರ್ ಪ್ಯಾಂಟ್ ಎಂ.ಓ-3 ಎಂದು, ಕ್ರೀಂ ಕಲರ್ ಬ್ರಾ ಎಂ.ಓ-4 ಎಂದು ಗುರುತಿಸಲಾಯಿತು. ನನ್ನ ಮಗಳ ಮೂರು ಮಕ್ಕಳನ್ನ ನಾನೇ ಸಾಕುತ್ತಿದ್ದೇನೆ ಮೇಲೆ ಹೇಳಿದ ಎಲ್ಲಾ ವಿಷಯಗಳನ್ನು ನಾನು ಪೊಲೀಸರ ಮುಂದೆ ಹೇಳಿರುತ್ತೇನೆ. ಬಾಡಿಗೆ ಮನೆ ಮಾಲೀಕರ ನನ್ನ ಮಗಳ ಕೊಲೆ ಆದ ವಿಷಯವನ್ನು ನನಗೆ ತಿಳಿಸಿರುತ್ತಾರೆ.

**<u>ಪಾಟೀಸವಾಲು:-ಆರೋಪಿ ಪರ ವಕೀಲರಿಂದಃ-</u>**

ಸಕಾರಣವಿಲ್ಲದೇ ಸಮಯ ಕೇಳಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆ ಇಲ್ಲ.</u>**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು